**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 230/2021**

**ಪ್ರಾ.ಸಾ.** 1

**ದಿನಾಂಕಃ 01.06.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

**ಪ್ರಾರಂಭ ಸಮಯಃ 04.25 ಪಿ ಎಂ**

**ಪಾಟೀ ಸವಾಲುಃ ಅಪಾದಿತರ ಪರ ಶ್ರೀ ಎಸ್ ಎಫ್ ಬಿ ವಕೀಲರಿಂದ**

ನನ್ನ ಸ್ವಂತ ಮೊಬೈಲ್ ಗೆ ಕರೆ ಬಂದಿತ್ತು. ಬಿ ಗುಡಿಯಾಳ ಪ್ರದೇಶದಲ್ಲಿ ಅಂಗಡಿಗಳು ಮತ್ತು ಮನೆಗಳು ಇವೆ ಅಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ ಜನಸಂದಣಿ ಕಡಿಮೆ ಇತ್ತು. ಗುನ್ನಾ ಸ್ಥಳಕ್ಕೆ ಹೋಗಿದ್ದೆ ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಅಪಾದಿತರು ಪ್ಲಾಸ್ಟಿಕ್ ಕವರನಲ್ಲಿ ಸ್ಪಿರಿಟನ್ನ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಅಪಾದಿತರು ತಪ್ಪಿಸಿಕೊಂಡು ಹೋದರು ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಅಪಾದಿತರು ಧರಿಸಿದ್ದಂತಹ ಅಂಗಿಯ ಬಣ್ಣ ಗೊತ್ತಿಲ್ಲ. ಚಾಸಾ2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಅಂದರೆ ಸರಿಯಲ್ಲ. ನಿಪಿ2 ನ್ನು ಠಾಣೆಯಲ್ಲಿಯೇ ತಯಾರು ಮಾಡಿದ್ದೇವೆ ಅಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿದ್ದಂತಹ ಮದ್ಯದ ಮಾಲನ್ನು ಈ ಪ್ರಕರಣದಲ್ಲಿ ಸೇರಿಸಿ ಅಪಾದಿತರ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ತನಿಖಾಧಿಕಾರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೂ ಮತ್ತು ಮುದ್ದೆಮಾಲಿಗೂ ಮತ್ತು ಅಪಾದಿತರಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ.

**1 ನೇ ಅಪಾದಿತನ ಪರ ವಕೀಲರು 2 ನೇ ಅಪಾದಿತನ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅನುಕರಿಸುವುದಾಗಿ ತಿಳಿಸಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**